

ಭೇಟಿಯಾಗುವ ಅವಕಾಶಗಳು ಬರುತ್ತಲೇ ಇತ್ತು. ತಿಂಗಳುಗಳ ನಂತರ ಭೇಟಿಯಾದಾಗ 'ನಾನ್ಯಾರು ನೆನಪಿದೆಯಾ ಮೇಡಂ?' ಎಂದು ಪ್ರತಿ ಬಾರಿ ಅವರ ಎದುರಿಗೆ ನಿಂತಾಗಲೆಲ್ಲ, ಖುಷಿಯಿಂದ ಒಂದಿಷ್ಟು ತುಟಿ ಅರಳಿಸಿ ನಗುತ್ತಾ 'ರೂಪ' ಎಂದು ಮಗುವಿನಂತೆ ಪ್ರೀತಿಯಿಂದ ಕೈ ಮುಂದೆ ಚಾಚುತ್ತಿದ್ದುದು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಇದ್ಯಾವ ಅನೂಹ್ಯ ಸಂಬಂಧವೋ ನಮ್ಮ ನಡುವೆ! ಇದಕ್ಕೆ ಯಾವ ಹೆಸರು? ಇವೆಲ್ಲವೂ ವಿವರಣೆಗೆ ಖಂಡಿತಾ ದಕ್ಕುವುದಲ್ಲ.

ಅವರು ಭೇಟಿಯಾದಾಗಲೆಲ್ಲ ಅವರ ಅದಮ್ಯ ಜೀವನಪ್ರೀತಿಯನ್ನು ಕಂಡು ಬೆರಗಾಗಿದ್ದೇನೆ. ಹಳೆಯ ವಿಷಯಗಳೆಲ್ಲ ಅವರಿಗೆ ಬಹಳಷ್ಟು ಮರೆತು ಹೋಗಿದ್ದರೂ, ನಾನು ಊಹಿಸಿದಂತೆ ಎಲ್ಲವೂ ಮರೆತಿರಲಿಲ್ಲ. ಅವರ ಎರಡು ವಿಡಿಯೋ ಸಂದರ್ಶನ ಮಾಡಬೇಕಾದ ಅವಕಾಶ ನನಗೇ ಬಂದಾಗ, ನಾವಿಬ್ಬರೇ ಏಕಾಂತದಲ್ಲಿ ಬಹಳಷ್ಟು ಮಾತುಕತೆ ನಡೆಸುತ್ತಿದ್ದೆವು. ಇಂತಹ ಕೆಲವು ಸಂದರ್ಭಗಳಲ್ಲಿ, ಹಳೆಯ ಕೆಲ ಸಂಗತಿಗಳನ್ನು, ತಮ್ಮ ಆತ್ಮೀಯ ವಲಯದ ವ್ಯಕ್ತಿಗಳ ಕುರಿತ ತಮ್ಮ ಅನಿಸಿಕೆಯನ್ನು ತುಂಡರಿಸಿದ ಪಿಸುಮಾತುಗಳಲ್ಲಿ ಹಂಚಿಕೊಳ್ಳುತ್ತಿದ್ದರು. ನಾನು ದಿಗ್ಭ್ರಾಂತಳಾಗಿದ್ದೆ. ಇದೆಲ್ಲಾ ಇವರಿಗೆ ಹೇಗೆ ನೆನಪಿದೆ? ಅವೆಲ್ಲವೂ ಅವರನ್ನು ಒಳಗೇ ಕಾಡುತ್ತಿವೆಯೇ? ಅದನ್ನು ಹೊರಹಾಕಲಾಗದೇ ತಳಮಳಿಸುತ್ತಿದ್ದಾರೆಯೇ? ನನ್ನೊಂದಿಗೆ ಯಾಕೆ ಇದನ್ನೆಲ್ಲಾ ಹೇಳುತ್ತಿದ್ದಾರೆ? ಬೆರಗಾಗಿದ್ದೆ.

ಹೊರಗಿನದೆಲ್ಲವನ್ನೂ ಗ್ರಹಿಸುವ ಶಕ್ತಿ ಇದ್ದರೂ ಅದನ್ನು ಸಮರ್ಥವಾಗಿ ಪುನರ್ ಅಭಿವ್ಯಕ್ತಿಸುವ ಶಕ್ತಿಯನ್ನು ಮಾತ್ರ ವಿಜಯಾ ಮೇಡಂ ಕಳೆದುಕೊಂಡಿದ್ದರು ಮತ್ತು ಬೇರೆಯವರು ತಿಳಿದಿರುವಂತೆ ಅವರ ಮನಸ್ಸು ನಿಷ್ಕ್ರಿಯಗೊಂಡಿರಲಿಲ್ಲ ಎಂದು ನನಗೆ ಸ್ಪಷ್ಟವಾಗಿ ಅರ್ಥವಾಗಿತ್ತು. 'ಈಗ ಕವಿತೆಗಳನ್ನು, ಚಿಕ್ಕ ಕಥೆಗಳನ್ನು ಬರೀತಿದ್ದೀನಿ. ಪ್ರಕಟಣೆಗೆ ಕಳಿಸಕ್ಕಾಗಲ್ಲ, ಇನ್ನೂ ತಿದ್ದಬೇಕು. ನೀವು ಓದಿ ನೋಡಿ ಹೇಳಿ' ಎಂದು ಡೈರಿಯಂತಹ ಪುಸ್ತಕವನ್ನು ಎದುರಿಗೆ ಹಿಡಿದಿದ್ದರು. ಅದನ್ನು ಓದುತ್ತಾ ನನ್ನ ಕಣ್ಣು ತುಂಬಿ ಬರುತ್ತಿತ್ತು. ಅವರ ಅಸ್ಪಷ್ಟ ಕವಿತೆಗಳು ನಿಗೂಢವಾಗಿ, ಅವರೊಳಗಿನದನ್ನೆಲ್ಲಾ ತೋಡಿಕೊಳ್ಳಲು ಕಾದಿರುವ ಏಕೈಕ ಮಾಧ್ಯಮವಾಗಿರುವಂತೆ ನನಗೆ ತೋರುತ್ತಿತ್ತು. ಅವರು ಮತ್ತೆ ಮತ್ತೆ ಬದುಕುವ ಪ್ರಯತ್ನವನ್ನು ಅನವರತ ಮಾಡುತ್ತಿದ್ದರು. ಅಂತಹ ಸ್ಥಿತಿಯಲ್ಲೂ ಅವರಲ್ಲಿರುವ ಆಶಾವಾದ ಕೇವಲ ಲೇಖಕಿಯರನ್ನು ಮಾತ್ರವಲ್ಲ, ಯಾವುದೇ ಪರಿಸ್ಥಿತಿಯಲ್ಲಿರುವ ನಿರಾಶಾವಾದಿಗಳನ್ನೂ ಪ್ರೇರೇಪಿಸುವಂತಹದ್ದು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಂದಿನ